ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4 |

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 92/2011**

**ಫ್ರಾಸಾ- 30 ಚಾಸಾ- 41**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶೇಷೇಗೌಡ |
| ತಂದೆಯ ಹೆಸರುಃ | : | ಅಣ್ಣೇಗೌಡ |
| ವಯಸ್ಸುಃ | : | 72 ವರ್ಷ |
| ಉದ್ಯೋಗಃ | : | ನಿವೃತ್ತ ಸಹಾಯಕ ನಿಯಂತ್ರಕರು |
| ವಾಸ | : | ಚಿಕ್ಕಮಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 07-03-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ಚಿಕ್ಕಮಗಳೂರು ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲದಲ್ಲಿ ಸಹಾಯಕ ನಿಯಂತ್ರಕನಾಗಿ 2008 ರಿಂದ ಏಪ್ರಿಲ್ 2010ರವರೆಗೆ ಕರ್ತವ್ಯ ನಿರ್ವಹಿಸಿದ್ದೇನೆ.

2.ದಿಃ6-1-2010ರಂದು ಚಿಕ್ಕಮಗಳೂರು ಲೋಕಾಯುಕ್ತ ಪೊಲೀಸರು ಸಿ ಎಸ್ ರಂಗಸ್ವಾಮಿ ಎಂಬುವವರು 1984 ರಿಂದ 2009ರವರೆಗೆ ಪಡೆದಿರುವ ವೇತನದ ತಃಖ್ತೆಯನ್ನು ದೃಢೀಕರಿಸಿ ನೀಡುವಂತೆ ಕೇಳಿದ್ದರು. ಅದರಂತೆ ನಾನು ವೇತನದ ತಃಖ್ತೆಯನ್ನು ದೃಢೀಕರಿಸಿ 13-1-2010ರಂದು ಪತ್ರಮುಖೇನ ನೀಡಿರುತ್ತೇನೆ. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಪಿ-70 ಎಂದು ವೇತನ ತಃಖ್ತೆ ಪಟ್ಟಿಯನ್ನು ನೋಡುತ್ತಿದ್ದು ಅದನ್ನು ನಿಪಿ-71 ಎಂದು ಗುರುತಿಸಲಾಯಿತು ನಿಪಿ-70 ಮತ್ತು 71 ರಲ್ಲಿ ನನ್ನ ರುಜು ಇರುತ್ತದೆ. ಅವುಗಳನ್ನು ಕ್ರಮವಾಗಿ ನಿಪಿ70(ಎ) ಮತ್ತು ನಿಪಿ-71(ಎ) ಎಂದು ಗುರುತಿಸಲಾಯಿತು.

**<u>ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ</u>**

1984 ರಿಂದ 2009ರವರೆಗೆ ಅವರು ಅನಧಿಕೃತ ರಜೆಯಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ಲೇಬರ್ ಕೋರ್ಟ್ ನಲ್ಲಿ ಆದ ಆದೇಶದಂತೆ ಅವರಿಗೆ 56204ರೂಪಾಯಿ ಪಾವತಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-70ರಲ್ಲಿ ನಾನು ಉದ್ದೇಶಪೂರ್ವಕವಾಗಿ ಆ ವಿಚಾರವನ್ನು ಕಾಣಿಸಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**